MR. SPEAKER :— I will give you two days time, not more than two days. ನಾನು ಎರಡು ದಿವಸಗಳಲ್ಲಿ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ :— ಕಳೆದ ಅಧಿವೇಶನದಲ್ಲಿ 125 ಪ್ರಶ್ನೆಗಳಿಗೆ ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು :— ನನಗೆ ನಿಮ್ಮ ಸಮಸ್ಯೆ ಅರ್ಥವಾಗಿದೆ. ಅವರು ಒಂದು ವಾರ ಕೇಳಿದರು. ನಾನು ಎರಡು ದಿವಸ ಎಂದು ಹೇಳಿದ್ದೇನೆ. ಎರಡು ದಿವಸಗಳಲ್ಲಿ ಉತ್ತರ ತರಿಸಿಕೊಳ್ಳುತ್ತೇನೆ. ಎರಡು ದಿವಸಗಳಲ್ಲಿ ಉತ್ತರ ತರಿಸಿಕೊಡದೇ ಹೋದರೆ ಮತ್ತೆ ಏನು ಮಾಡಬೇಕು ಎನ್ನುವುದನ್ನು ಸಭಾನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇಲ್ಲಿ ನಾನು ಅನೌನ್ಸ್ ಮಾಡುತ್ತೇನೆ. please give me time.

ಗುಬ್ಬಿ ತಾಲ್ಲೂಕಿನ ನಿಟ್ಟೂರಿನಲ್ಲಿ ಪೊಲೀಸ್ ಠಾಣೆ ಮಂಜೂರು.

6(03) ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಗುಬ್ಬಿ ತಾಲ್ಲೂಕು, ನಿಟ್ಟೂರು ಗ್ರಾಮಕ್ಕೆ ಪೊಲೀಸ್ ಠಾಣೆ ಮಂಜೂರು ಮಾಡಬೇಕೆಂದು ಅಲ್ಲಿನ ಸಾರ್ವಜನಿಕರಿಂದ ಮತ್ತು ಶಾಸಕರಿಂದ ಸುಮಾರು 8-10 ವರ್ಷಗಳಿಂದ ಸರ್ಕಾರಕ್ಕೆ ಒತ್ತಡ ಬರುತ್ತಿರುವುದು ನಿಜವೇ?

2. ಈ ವಿಚಾರದಲ್ಲಿ ವಿಧಾನಸಭೆಯಲ್ಲಿ ಮಂಜೂರು ಮಾಡುವುದಾಗಿ ಆಶ್ವಾಸನೆ ಕೊಟ್ಟಿದ್ದು ನಿಜವಲ್ಲವೇ? ಹಾಗಿದ್ದಲ್ಲಿ ಆ ಬಗ್ಗೆ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣಗಳೇನು?

3. ಈ ವರ್ಷವಾದರೂ ಅದನ್ನು ಮಂಜೂರು ಮಾಡಿಕೊಡಲಾಗುತ್ತದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :—

1. ಹೌದು.

2. ಹೌದು,

ಹಣಕಾಸಿನ ಕೊರತೆಯಿಂದಾಗಿ ಈ ಆಶ್ವಾಸನೆ ಪೂರೈಸಲು ಸಾಧ್ಯವಾಗಿಲ್ಲ.

3. ಹೊಸ ಪೊಲೀಸ್ ಠಾಣೆಗಳನ್ನು ಮಂಜೂರು ಮಾಡುವಾಗ ನಿಟ್ಟೂರು ಠಾಣೆಯ ಬಗೆಗೂ ಪರಿಗಣಿಸಲಾಗುವುದು.

ಅಧ್ಯಕ್ಷರು :— ಮಾನ್ಯ ಸದಸ್ಯರಾದ ಶ್ರೀ ಜಿ.ಎಸ್. ಶಿವನಂಜಪ್ಪ ಅವರ ಪರವಾಗಿ ಶ್ರೀ ಎಸ್.ಎಂ. ನಾಗರಾಜ್ ಅವರು ಕೇಳುತ್ತಾರೆ.

ಶ್ರೀ ಎಸ್.ಎಂ. ನಾಗರಾಜ್ :— ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಹಿಂದೆ ಆಶ್ವಾಸನೆ ಕೊಟ್ಟರೂ ಕೂಡ ಅದನ್ನು ಮಾಡಿಲ್ಲವೆಂದು ಕೇಳಿದ್ದಾರೆ. 'ಹೌದು, ಹಣಕಾಸಿನ ತೊಂದರೆಯಿಂದ ಮಾಡುವುದಕ್ಕೆ ಆಗಿಲ್ಲ'ವೆಂದು ಉತ್ತರ ಕೊಟ್ಟಿದ್ದಾರೆ. ಹಣಕಾಸಿನ ತೊಂದರೆ ಇದ್ದರೆ ಹಿಂದಿನ ವರ್ಷ ಸಹ ಹೇಗೆ ಹಲವಾರು ಸ್ಟೇಷನ್‌ಗಳಿಗೆ ಮಂಜೂರಾತಿ ಕೊಟ್ಟಿದ್ದಾರೆ. ಆದರಿಂದ ದಯವಿಟ್ಟು ಈ ಸಾರಿ ಮಂಜೂರು ಮಾಡಿಕೊಡುತ್ತೇವೆ ಎಂದು ಅವರು ತಮ್ಮ ಮೂಲಕ ಆಶ್ವಾಸನೆ ಕೊಡಲಿ ಎಂದು . ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಅಧ್ಯಕ್ಷರೇ, ನಮ್ಮ ಸರ್ಕಾರದ ನೀತಿ ಹಣಕಾಸಿನ ಕೊರತೆ ಇದೆ. ಅದರ ಜೊತೆಗೆ ಹೆಚ್ಚಿಗೆ ಪೊಲೀಸ್ ಠಾಣೆಗಳನ್ನು ಮಾಡುವುದರ ಬದಲಾಗಿ ಇರತಕ್ಕಂಥ ಪೊಲೀಸ್ ಸ್ಟೇಷನ್‌ಗಳನ್ನು ಆಧುನೀಕರಣ ಮಾಡತಕ್ಕಂಥಾದ್ದು, ಇನ್ನೂ ಹೆಚ್ಚು ಬಲಯುತವಾಗಿ ಮಾಡತಕ್ಕಂಥಾದ್ದರ ಬಗ್ಗೆ ಪ್ರಾಮುಖ್ಯತೆ ಕೊಡಬೇಕು ಎನ್ನತಕ್ಕಂಥ ಉದ್ದೇಶ ಇರುವುದರಿಂದ ಇದನ್ನು ಪರಿಶೀಲನಾ ಹಂತದಲ್ಲೇ ಇಡುತ್ತೇನೆ ಸ್ವಾಮಿ.

ಸೂರತ್ಕಲ್ ಕ್ಷೇತ್ರಕ್ಕೆ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಿಂದ ಬಿಡುಗಡೆಯಾದ ಹಣ.

07(348) ಶ್ರೀ ಕುಂಭ್ಳೆ ಸುಂದರರಾವ್ (ಸುರತ್ಕಲ್) :— ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಕಳೆದ ನಾಲ್ಕು ವರ್ಷಗಳಲ್ಲಿ ಬಿಡುಗಡೆ ಮಾಡಿದ ಹಣ ಎಷ್ಟು, (ಕಾಮಗಾರಿವಾರು ವಿವರ ಒದಗಿಸುವುದು);

ಆ) ಸೂರತ್ಕಲ್ ಕ್ಷೇತ್ರದಲ್ಲಿ ಯಾವ ಯಾವ ಕಾಮಗಾರಿಗಳಿಗಾಗಿ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ, ನಿಗದಿತ ಯೋಜನೆಗಳಿಗಾಗಿ ಸೂಚಿತ ಮೊತ್ತವು ಪೂರ್ಣವಾಗಿ ಬಿಡುಗಡೆಯಾಗಿದೆಯೇ, ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಕೆ. ವೆಂಕಟೇಶ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು) :—

ಅ) ಮಂಡಳಿಯು ಕಾಮಗಾರಿವಾರು ಹಣ ಬಿಡುಗಡೆ ಮಾಡುವುದಿಲ್ಲ. ಅನುಷ್ಠಾನಾಧಿಕಾರಿಗಳಿಗೆ ಇಡೀ ಗಂಟಾಗಿ ನೀಡಿದ ಹಣದ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) ಮಂಡಳಿಯು ಕಾಮಗಾರಿವಾರು ಹಣ ಬಿಡುಗಡೆ ಮಾಡುವುದಿಲ್ಲ. ಸೂರತ್ಕಲ್ ಕ್ಷೇತ್ರದಲ್ಲಿ ಖರ್ಚಾದ ಹಣದ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ. ಹಣವನ್ನು ಕಾಮಗಾರಿಯ ಪ್ರಗತಿಯನ್ನು ಆಧಾರಿಸಿ ಬಿಡುಗಡೆ ಮಾಡಲಾಗುವುದು.